ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,
ಸೆಕ್ಟರ್ ನಂ–63, ನವನಗರ, ಬಾಗಲಕೋಟ–03
Tel:08354-297330

ಸ್ವಾತಂತ್ರ್ಯದ ಅಮೃತ ಮಹೋತ್ಸವ

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O&M Circle, HESCOM, Sector No-63,
Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com

Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ:ಅಇಕೆ/ಅಅ(ವಿ)/ಉಲೆನಿ/ಸಲೆ/ಹಿಸ–1/23–24/ 7967-7971 ದಿನಾಂಕ: 25 JAN 2024

ದಿನಾಂಕ: 27-12-2023 ರಂದು ಮಧ್ಯಾಹ್ನ 12:30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ ಹು.ವಿ.ಸ.ಕಂ.ನಿ., ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ, ಹು.ವಿ.ಸ.ಕಂ.ನಿ., ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು:
1) ಶ್ರೀ. ಖಲೀಂ ಅಹಮದ್, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟ.
2) ಶ್ರೀ. ಸುರೇಶ ಮುರಗೋಡ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ–ವಿಭಾಗ ಹೆಸ್ಕಾಂ, ರಬಕವಿ.
3) ಶ್ರೀ. ಮಲ್ಲಯ್ಯ ನಿಂ ಮಠಪತಿ, ಸಾ॥ಯಲ್ಲಟ್ಟಿ ತಾ॥ ರಬಕವಿ–ಬನಹಟ್ಟಿ ಜಿ॥ಬಾಗಲಕೋಟೆ ಮೋ:9620157159.

**ಪ್ರಕರಣ ಸಂಖ್ಯೆ: 07/2023**

ಶ್ರೀ. ಮಲ್ಲಯ್ಯ ನಿಂ. ಮಠಪತಿ
ಪ್ರತಿನಿಧಿ: } ------- ದೂರುದಾರರು.

ವಿರುದ್ಧ:
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ–ವಿಭಾಗ
ಹುವಿಸಕಂನಿ., ರಬಕವಿ } ------- ಪ್ರತಿವಾದಿ

ವಿಷಯ: ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಹಿಂದಿನ ವಿದ್ಯುತ್ ಕಂಬದಿಂದ ಶ್ರೀ. ನಿತ್ಯಾನಂದ ವಿದ್ಯುತ್ ಕಂಬದವರೆಗೆ ವಿದ್ಯುತ್ ತಂತಿ ಹಳೆಯದಾಗಿರುತ್ತದೆ. ಆದ ಕಾರಣ ಹೊಸ ವಿದ್ಯುತ್ ತಂತಿ ಜೋಡಿಸುವ ಕುರಿತು.

*****

ಪ್ರಕರಣ ಸಂಖ್ಯೆ: 07/2023ಕ್ಕೆ ಸಂಬಂಧಿಸಿದಂತೆ, ದಿನಾಂಕ: 27-12-2023 ರಂದು ಮಧ್ಯಾಹ್ನ 12:30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಗೇರಿ, ಅಧೀಕ್ಷಕ ಅಭಿಯಂತರರು(ವಿ), ಕಾ ಮತ್ತು ಪಾ ವೃತ್ತ ಹುವಿಸಕಂನಿ ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಕಾ ಮತ್ತು ಪಾ ವೃತ್ತ ಹು.ವಿ.ಸ.ಕಂ.ನಿ., ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರನ್ನು/ಅಧಿಕಾರಿಗಳನ್ನು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಪು.ತಿ.ನೋ.

**ಶ್ರೀ. ಮಲ್ಲಯ್ಯ ನಿಂ. ಮಠಪತಿ, ಸಾ|| ಯಲ್ಲಟ್ಟಿ ತಾ|| ರಬಕವಿ-ಬನಹಟ್ಟಿ ಜಿ|| ಬಾಗಲಕೋಟೆ ರವರು ದಿನಾಂಕ: 27-12-2023 ರಂದು ನಡೆದ ಸಭೆಯಲ್ಲಿ ನೀಡಿದ ಹೇಳಿಕೆ**

ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಹಿಂದಿನ ವಿದ್ಯುತ್ ಕಂಬದಿಂದ ಶ್ರೀ. ನಿತ್ಯಾನಂದ ವಿದ್ಯುತ್ ಕಂಬದವರೆಗೆ ವಿದ್ಯುತ್ ತಂತಿ ಹಳೆಯದಾಗಿರುತ್ತದೆ. ಆದ ಕಾರಣ ಹೊಸ ವಿದ್ಯುತ್ ತಂತಿ ಜೋಡಿಸಬೇಕೆಂದು ವಿನಂತಿಸಿದರು. ಸದರೀ ದೂರುದಾರರು ಹಳೆಯ ವಿದ್ಯುತ್ ತಂತಿಯಲ್ಲಿ ವಿದ್ಯುತ್ ಸಂಪರ್ಕ ಇಲ್ಲದಿದ್ದಲ್ಲಿ ಸದರೀ ಮಾರ್ಗವನ್ನು ತೆಗೆಯಲು ವಿನಂತಿಸಿದರು.

**ಶ್ರೀ. ಸುರೇಶ ಮುರಗೋಡ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ರಬಕವಿ ರವರು ದಿನಾಂಕ: 27-12-2023 ರಂದು ನಡೆದ ಸಭೆಯಲ್ಲಿ ನೀಡಿದ ಹೇಳಿಕೆ:**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ರಬಕವಿ ರವರು ಸಭೆಯಲ್ಲಿ ಕಂಬ ತಂತಿಯ ಗುಣಮಟ್ಟವು ಒಳ್ಳೆಯದು ಇರುತ್ತದೆ. ಸದರೀ ವಿದ್ಯುತ್ ತಂತಿಯನ್ನು ನಿಷ್ಫಲ ಮಾಡಿದ್ದು ಅದರಲ್ಲಿ ಯಾವುದೇ ವಿದ್ಯುತ್‌ನ್ನು ಹರಿಸುವದಿಲ್ಲ. ನಮ್ಮ ಇಲಾಖೆಯಿಂದ ಕಾಡಯ್ಯನ ಗುಡಿ ದೇವಸ್ಥಾನದ ಆವರಣದಲ್ಲಿ 25 ಕೆವ್ಹಿಎ ಹೊಸ ವಿದ್ಯುತ್ ಪರಿವರ್ತಕವನ್ನು ಅಳವಡಿಸಲಾಗಿದೆ. ನೀವು ಹೇಳಿದ ವಿದ್ಯುತ್ ಮಾರ್ಗವು 25 ಕೆವ್ಹಿಎ ನರಸಿಂಹ ಮಠದ ಪರಿವರ್ತಕದ ಮೇಲೆ ಬರುತ್ತಿದ್ದು ಮತ್ತು ಅದು ಹೆಚ್ಚಿನ ಭಾರವನ್ನು ಹೊಂದಿರುವದರಿಂದ ಸದರೀ ಎಲ್.ಟಿ ಲೈನದ ಭಾರವನ್ನು ಹೊಸದಾಗಿ ಅಳವಡಿಸಿದ ಪರಿವರ್ತಕದ ಮೇಲೆ ವಿದ್ಯುತ್ ಭಾರವನ್ನು ಸ್ಥಳಾಂತರಿಸಲಾಗಿದೆ. ಕಾರಣ ನೀವು ಹೇಳಿರುವ ತಂತಿಯನ್ನು ಬದಲಾವಣೆ ಮಾಡುವ ಅವಶ್ಯಕತೆ ಇರುವದಿಲ್ಲವೆಂದು ತಿಳಿಸಿರುತ್ತಾರೆ.

**:: ಆ ದೇ ಶ ::**

**ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2023-24/** **ದಿನಾಂಕ:**

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ರಬಕವಿ ಹಾಗೂ ದೂರುದಾರರ ಹೇಳಿಕೆಯನ್ನು ಪರಿಶೀಲಿಸಿ, ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಹಿಂದಿನ ವಿದ್ಯುತ್ ಕಂಬದಿಂದ ಶ್ರೀ. ನಿತ್ಯಾನಂದ ವಿದ್ಯುತ್ ಕಂಬದವರೆಗೆ ವಿದ್ಯುತ್ ತಂತಿಯನ್ನು ತೆಗೆಯಲು ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ರಬಕವಿ ರವರಿಗೆ ಸೂಚಿಸಿ, ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

**ಕಾರ್ಯನಿರ್ವಾಹಕ ಅಭಿಯಂತರರು(ವಿ),**
**ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ**
**ಸದಸ್ಯರು, ಬಾಗಲಕೋಟ.**

**ಅಧ್ಯಕ್ಷರು,**
**(ಶ್ರೀ. ಸಿದ್ದಪ್ಪ ಬಿಂಜಗೇರಿ,)**
**ಅಧೀಕ್ಷಕ ಅಭಿಯಂತರರು(ವಿ) ವಿಜಯಪೂರ ಹಾಗೂ**
**ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ**
**ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟೆ.**

**ಪ್ರತಿಯನ್ನು ಮಾನ್ಯರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ:**

ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ.

ಪ್ರತಿ ಅಭಿವಂದನೆಗಳೊಂದಿಗೆ:

ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ.

ಪ್ರತಿಗಳು ಮಾಹಿತಿಗಾಗಿ:

1) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಜಮಖಂಡಿ.
2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ರಬಕವಿ.
3) ಶ್ರೀ. ಮಲ್ಲಯ್ಯ ನಿಂ. ಮಠಪತಿ, ಸಾ|| ಯಲ್ಲಟ್ಟಿ ತಾ|| ರಬಕವಿ-ಬನಹಟ್ಟಿ ಜಿ|| ಬಾಗಲಕೋಟೆ
   ಮೋ ಸಂ: 9620157159

ಕಛೇರಿ ಪ್ರತಿ/ಪ್ರಧಾನ ಕಡತ.